ಸಾಕ್ಷಿಯನ್ನು ದಿಃ 03-03-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ.ಎಸ್ ಎಮ್ ಎಚ್ ವಕೀಲರಿಂದಃ (ಪ್ರತಿವಾದಿ ಪರವಾಗಿ)**

ನಾನು PUC ವರೆಗೆ ಓದಿದ್ದೇನೆ. ನಾನು 1992-93 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮುಗಿಸಿದ್ದೇನೆಂದರೆ ಸರಿ. ನಾನು, ವಾದಿ, ಪಿ ಡಬ್ಲೂಃ 3 ಸಹಪಾಠಿಗಳು ಎಂದರೆ ಸರಿ. ನನ್ನ ಮುಖ್ಯವಿಚಾರಣೆ ಬರೆಯಲು ಮಾಹಿತಿಯನ್ನು ವಾದಿ ಹಾಗೂ ನಾನು ನೀಡಿದ್ದೇವೆ. ಸಾಕ್ಷಿ ಮುಂದುವರೆದು ಮುಖ್ಯವಿಚಾರಣೆಗೆ ನಾನೇ ಮಾಹಿತಿ ನೀಡಿದ್ದೇನೆಂದು ಹೇಳುತ್ತಾರೆ. 2021 ನೇ ಇಸ್ವಿಯ ಏಪ್ರಿಲ್ ತಿಂಗಳಿನಲ್ಲಿ ದಾವಾ ಜಮೀನಿನ ಖರೀದಿ ಮಾತುಕತೆಗೆ ಸೇರಿದ್ದೆವು. ಆ ದಿನ ಪ್ರತಿವಾದಿಯ ಮನೆಗೆ ಹೋಗಿದ್ದೆವು . ಅವರ ಮನೆ ಕೆ ಎಸ್ ಆರ್ ಟಿ ಸಿ ಕಾಲೋನಿಯಲ್ಲಿ ಇದೆ. ನಾವು ಅಲ್ಲಿಗೆ ಹೋದಾಗ ಸಾಯಂಕಾಲ 5-00 ಗಂಟೆ ಆಗಿತ್ತು. ದಾಖಲೆ ಬರೆಯಲು ಸುಮಾರು ಒಂದು ಗಂಟೆ ಹಿಡಿಯಿತು. ದಾವಾ ಆಸ್ತಿಯ ಸಂಖ್ಯೆ 1580 ಇದ್ದು, ಅಳತೆ 35X48 ಅಡಿ ಇರುತ್ತದೆ. ದಾವಾ ಆಸ್ತಿ ಉತಾರ ನೋಡಿದ್ದೇನೆ. ನಿಪಿಃ 2 ನ್ನು ಸಾಕ್ಷಿಗೆ ತೋರಿಸಿ ಇದೆ ಉತಾರಯೇ? ಎಂದು ಪ್ರಶ್ನಿಸಿದ್ದು, ಮಾತುಕತೆ ಸಮಯದಲ್ಲಿ ಕೈಬರಹದ ಉತಾರ ನೋಡಿದ್ದು, ನಿಪಿಃ 2 ಕಂಪ್ಯೂಟರಿಕರಣ ಆದ ನಂತರ ತೆಗಿಸಿದ ಉತಾರ ಇರುತ್ತದೆ ಎಂದು ಹೇಳುತ್ತಾರೆ. 19/04/2021 ಕ್ಕಿಂತ ಮೊದಲು ನಾವು ಪ್ರತಿವಾದಿಯನ್ನು ಭೇಟಿಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದು ದಿನದ ಮೊದಲೆ ಭೇಟಿಯಾಗಿದ್ದು ಆ ದಿನ ಮಾತುಕತೆಯಾಗಿತ್ತು ಮರುದಿನ ಕಾಗದ ಮಾಡಲಾಯಿತು ಎಂದು ಹೇಳುತ್ತಾರೆ. ಕಾಗದದ ಹಿಂದಿನ ದಿನ ಪ್ರತಿವಾದಿ ನಮ್ಮ ಮನೆಗೆ ಬಂದಿದ್ದರು. ಆಗ ಮನೆಯಲ್ಲಿ ನಾನು ಹಾಗೂ ನಮ್ಮ ಕುಟುಂಬದವರು ಇದ್ದೆವು. ಪ್ರತಿವಾದಿ ತಾನು ದಾವಾ ಆಸ್ತಿಯನ್ನು ಮಾರಲು ಇಚ್ಚಿಸಿರುವುದಾಗಿ ಹೇಳಿದರು. ಆ ವಿಷಯವನ್ನು ನಾನು ವಾದಿಗೆ ತಿಳಿಸಿದೆನು. ಆ ದಿನ ಪ್ರತಿವಾದಿ ನಮ್ಮ ಮನೆಗೆ ಬಂದಿಲ್ಲ ಮತ್ತು ತಾನು ದಾವಾ ಆಸ್ತಿ ಮಾರುವುದಾಗಿ ಹೇಳಿಲ್ಲ ಎಂದರೆ ಸರಿಯಲ್ಲ.

ದಿಃ 18/04/2021 ರ ಮಾತುಕತೆ ಸಮಯದಲ್ಲಿ ಪ್ರತಿವಾದಿ ದಾವಾ ಆಸ್ತಿಯ ಬೆಲೆ ರೂ.8.5 ಲಕ್ಷ ಹೇಳಿದ್ದು, ಮಾತಕತೆಯ ನಂತರ ರೂ.7,35,000/- ಗಳಿಗೆ ಮುಗಿಯಿತು. ಮರುದಿನ ದಿನಾಂಕ ದಿಃ 19/04/2021 ರಂದು ದಾಖಲೆ ಬರೆಯುವ ದಿನ ನಾವು ಅಂದರೆ ನಾನು, ವಾದಿ ಬಸವರಾಜ, ಚಂದ್ರಶೇಖರ ಚಬ್ಬೇರಬಾವಿ ಹಾಗೂ ಪ್ರಕಾಶ ಅರಹುಣಸಿ ಪ್ರತಿವಾದಿಯ ಮನೆಗೆ ಹೋದೆವು. ಆ ದಿನ ಪ್ರತಿವಾದಿ ಹಾಗೂ ಅವರ ಮಗ ಮನೆಯಲ್ಲಿ ಇದ್ದರು. ಆ ದಿನ ಬೇರೆ ವಿಷಯ ಮಾತನಾಡಲಿಲ್ಲ. ಹಿಂದಿನ ದಿನ ಆದ ಮಾತುಕತೆಯಂತೆ ಕಾಗದ ಬರೆಯಲಾಯಿತು. ಪ್ರತಿವಾದಿಯ ವಿನಂತಿಯ ಮೇರೆಗೆ ಚಾಪಾ ಕಾಗದವನ್ನು ದಿಃ 19/04/2021 ರಂದು ಸಾಯಂಕಾಲ 3-30, 4-00 ಗಂಟೆಯ ಸಮಯದಲ್ಲಿ ನಾವೆ ತಂದೆವು. ಚಾಪಾ ಕಾಗದ ಎಷ್ಟು ಮುಖಬೆಲೆಯದ್ದು ಇತ್ತು ಎಂದರೆ ಅದನ್ನು ವಾದಿ ಖರೀದಿಸಿ ತಂದಿದ್ದು, ನಾನು ಅದನ್ನು ನೋಡಿಲ್ಲ ಎಂದು ಹೇಳುತ್ತಾರೆ. ನಾನು ಮೊದಲನೆ ಸಾಕ್ಷಿದಾರನಾಗಿ ಸಹಿ ಮಾಡಿದ್ದೆನೆ. ದಾಖಲೆಯನ್ನು ಎಲ್ಲಿ ಬರೆಯಲಾಯಿತು ಎಂದು ಅದರಲ್ಲಿ ಬರೆದಿಲ್ಲ. ಕಾಗದವನ್ನು ಬರೆದ ನಂತರ ನಾನೆ ಮೊದಲು ಸಹಿ ಮಾಡಿದ್ದೆನೆ. ನನ್ನ ನಂತರ ಚಂದ್ರಶೇಖರ ಸಹಿ ಮಾಡಿದ್ದಾರೆ. ನಿಪಿಃ 1 ರಲ್ಲಿ ದಸ್ತೂರ ಎನ್ನುವ ಸ್ಥಳದಲ್ಲಿ ಈ ದಾವೆ ಮಾಡುವ ಸಮಯದಲ್ಲಿ ಪ್ರಕಾಶ ಅರಹುಣಸಿ ಎನ್ನುವವರು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ 19/04/2021 ರಂದು ಯಾವುದೇ ಖರೀದಿ ಕರಾರು ಪತ್ರ ಆಗಿಲ್ಲ ಮತ್ತು ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ದಾಖಲೆ ಬರೆದ ನಂತರ ಅದೆ ದಿನ ಅದನ್ನು ನೋಟರಿ ಮಾಡಿಸಲಾಯಿತು. ನೋಟರಿಯವರ ಹೆಸರು ಗೊತ್ತಿಲ್ಲ.

ದಾವಾ ಕರಾರು ಪತ್ರ ಆಗುವ ಮೊದಲು ಆಸ್ತಿ ಖರೀದಿಸುವ ಸಂಬಂಧವಾಗಿ ಸಾರ್ವಜನಿಕ ನೋಟಿಸು ನೀಡುವಂತೆ ನಾನು ವಾದಿಗೆ ಹೇಳಿಲ್ಲ. ದಿಃ 19/04/2021 ರಂದು ವಾದಿ ಪ್ರತಿವಾದಿಗೆ ರೂ.2 ಲಕ್ಷ ಹಣ ನೀಡಿದ್ದಾರೆ. ಸದರಿ ಹಣ ಎಷ್ಟು ಮುಖಬೆಲೆಯ ನೋಟುಗಳಾಗಿದ್ದವು ಹೇಳಲು ಬರುವುದಿಲ್ಲ. ಆ ದಿನ ವಾದಿ ಪ್ರತಿವಾದಿಗೆ ರೂ.2 ಲಕ್ಷ ಹಣ

ನೀಡಿಲ್ಲ ಎಂದರೆ ಸರಿಯಲ್ಲ. ದಾಖಲೆ ಬರೆದ ನಂತರ ನಮಗೆ ಓದಿ ಹೇಳಲಾಯಿತು. ಪ್ರತಿವಾದಿ ಯಾವುದೇ ಖರೀದಿ ವಚನ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿ ಹಾಗೂ ದಸ್ತೂರರಾದ ಪ್ರಕಾಶ ಅರಹುಣಸಿ ಖಾಸಾ ಸಹೋದರರು ಎಂದರೆ ಸರಿ. ನಾನು ಹಾಗೂ ಚಂದ್ರಶೇಖರ ಸ್ನೇಹಿತರಾಗಿರುವುದರಿಂದ ನಾವೆಲ್ಲರೂ ಶಾಮೀಲಾಗಿ ಖೊಟ್ಟಿ ವಚನ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.